ಕರ್ನಾಟಕ ಸರ್ಕಾರ - ಜಿಲ್ಲಾ ಪಂಚಾಯತ್ ಮಂಗಳೂರು

ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು.

# ಟೆಂಡರ್ ಪ್ರಕಟಣೆ/2014-15

## (Notice inviting tender through e-Procurement)

**ಸಂಖ್ಯೆ:ಕಾ.ನಿ.ಇ:ದ.ಕ.ಪಂ.ರಾ.ಇಂ.ವಿ.ಮಂ:ನಬಾರ್ಡ್19:ಟೆಂಡರ್: ಎಇ-3:2014-15:251: 24.05.2014**

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಿವಿಲ್ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದಕ್ಷಿಣ ಕನ್ನಡ ಜಿಲ್ಲೆಯ ಈ ಕೆಳಕಂಡ ಕಾಮಗಾರಿಗೆ Standard tender document K/W-3 ಮತ್ತು K/W-4 ರ ನಿಬಂಧನೆಗೊಳಪಟ್ಟಂತೆ ದ್ವಿ ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಟರ್ನ್ ಕೀ ಆಧಾರದಮೇಲೆ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಐಟಂವಾರು ಟೆಂಡರನ್ನು ನಮೂದಿಸಿದ ದಿನಾಂಕದಂದು ಸಾಯಂಕಾಲ 5.00 ಘಂಟೆಯವರೆಗೆ www.eproc.karnataka.gov.in ವೆಬ್ ಸೈಟ್‌ನಲ್ಲಿ ಸ್ವೀಕರಿಸಲಾಗುವುದು.

1) ಅರ್ಜಿಗಳನ್ನು ಇ- ಪ್ರಕ್ಯೂರ್ ಮೆಂಟ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ :04.07.2014 5.00 ಗಂಟೆಯವರೆಗೆ

2) ಭರ್ತಿ ಮಾಡಿದ ಟೆಂಡರ್ ಗುತ್ತಿಗೆಯನ್ನು ಇ - ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ:04.07.2014 5.30 ಗಂಟೆಯವರೆಗೆ

3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಾಧ್ಯವಾದರೆ:07.07.2014 5.00 ಗಂಟೆಯ ನಂತರ

4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಸಾಧ್ಯವಾದರೆ:14.07.2014.

**ಜಿಲ್ಲೆ: ದಕ್ಷಿಣ ಕನ್ನಡ**

**ಲೆಕ್ಕ ಶೀರ್ಷಿಕೆ: ಆರ್.ಐ.ಡಿ.ಎಫ್.19 ನಬಾರ್ಡ್ :**

1) ಬೆಳ್ತಂಗಡಿ ತಾಲೂಕು ನಿಡ್ಲೆ ಗ್ರಾಮದ ಬೂಡುಜಾಲು ಶೇಡಿ ಕೊಡಂಗೆ ರಸ್ತೆ ಅಭಿವೃದ್ಧಿ(37923) ಕಾಮಗಾರಿ ಅಂದಾಜು ಮೊತ್ತ ರೂ.103.04 ಲಕ್ಷ ಇ.ಎಂ.ಡಿ. ರೂ.154560.00. ಖಾಲಿ ಇ – ಟೆಂಡರ್ ಫಾರ್ಮ್ ಬೆಲೆ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿದ್ದಂತೆ, ಗುತ್ತಿಗೆದಾರರ ದರ್ಜೆ – 1ನೆ ದರ್ಜೆ, ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ – ಆರು ತಿಂಗಳು

2) ಬೆಳ್ತಂಗಡಿ ತಾಲೂಕು ಬಂದಾರು ಗ್ರಾಮಪಂಚಾಯತಿಯ ಪುತ್ತಿಲ ಮೈರೋಲತಡ್ಕ ರಸ್ತೆಯ ಪುತ್ತಿಲ ಎಂಬಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಅಂದಾಜು ಮೊತ್ತ ರೂ.100.00 ಲಕ್ಷ ಇ.ಎಂ.ಡಿ. ರೂ.150000.00. ಖಾಲಿ ಇ – ಟೆಂಡರ್ ಫಾರ್ಮ್ ಬೆಲೆ ಇ- ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿದ್ದಂತೆ, ಗುತ್ತಿಗೆದಾರರ ದರ್ಜೆ – 1ನೆ ದರ್ಜೆ, ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ – ಆರು ತಿಂಗಳು.

**ಟಿಪ್ಪಣಿ:**

ಗುತ್ತಿಗೆದಾರರು Standard Tender Document Kw-3 ನಿಬಂಧನೆಗಳ ಅನುಸಾರವಾಗಿ ಟೆಂಡರ್‌ನೊಂದಿಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು ಮತ್ತು ಯಾವುದೇ ಟೆಂಡರನ್ನು ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಗೊಳಿಸುವ ಅಧಿಕಾರ ಕೆಳಗೆ ಸಹಿ ಮಾಡಿದ ಅಧಿಕಾರಿಗಳಿಗಿದೆ. ಗುತ್ತಿಗೆದಾರರು ತಮ್ಮ ನಿಖರವಾದ ಅಂಚೆ ವಿಳಾಸ ಮತ್ತು ಫೋನ್ ನಂಬರ್ ಟೆಂಡರ್‌ನೊಂದಿಗೆ ಕಳುಹಿಸತಕ್ಕದ್ದು. ಮೇಲಿನ ಕಾಮಗಾರಿಗಳಿಗೆ e-procurement portal - www.eproc.karnataka.gov.in ಮುಖಾಂತರ ಮಾತ್ರ ಭಾಗವಹಿಸಬೇಕಾಗುತ್ತದೆ.

ಯಾವ ಕಾರಣವನ್ನು ಸಹ ನೀಡದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಟೆಂಡರ್ ಸ್ವೀಕರಿಸುವವದನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ.

ಯಾವುದೇ ಕಾರಣಕ್ಕೂ ಅರ್ಜಿಯ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ ಹಾಗೂ ಬೇರೆ ಕೆಲಸಕ್ಕೆ ವರ್ಗಾಯಿಸುವಂತಿಲ್ಲ.

ಪೂರ್ಣ ಟೆಂಡರುಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

ಕಾಮಗಾರಿಗೆ ಬೇಕಾಗುವ ಸಿಮೆಂಟು, ಸ್ಟೀಲ್, ಡಾಂಬರು, ಪೈಪ್‌ಗಳನ್ನು ಹಾಗು ಇನ್ನಿತರ ಸಾಮಗ್ರಿಗಳನ್ನು ಗುತ್ತಿಗೆದಾರರು ಖರೀದಿಸಿ, ಅವುಗಳ ಗುಣಮಟ್ಟದ ಕುರಿತು ಪಿ.ಅರ್.ಇ.ಡಿ. ಲ್ಯಾಬ್‌ನಿಂದ ತಮ್ಮ ಸ್ವಂತ ಖರ್ಚಿನಲ್ಲಿ ಪರೀಕ್ಷಣೆ ಮಾಡಿಸಿ ಆ ಕುರಿತು ವರದಿ ಪಡೆದು ಪೂರೈಸಿ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

ಈ ಹಿಂದೆ ಯಾವುದೇ ಟೆಂಡರಿನಲ್ಲಿ ಯಶಸ್ವಿಯಾಗಿ, ಸೆಕ್ಯೂರಿಟಿ ಡೆಪಾಸಿಟ್ ಸಲ್ಲಿಸದೇ ಇದ್ದ ಗುತ್ತಿಗೆದಾರರಿಗೆ ಈ ಟೆಂಡರ್‌ನಲ್ಲಿ ಭಾಗವಹಿಸಲು ನಿಷೇದಿಸಲಾಗಿದೆ. ಅಂಥ ಗುತ್ತಿಗೆದಾರರ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಮೇಲೆ ನಮೂದಿಸಿದ ದಿನಾಂಕಗಳಂದು ಸರ್ಕಾರಿ ರಜೆ ಇದ್ದಲ್ಲಿ ಅಂದಿನ ಪ್ರಕ್ರಿಯೆಗಳನ್ನು ಮರುದಿನ ಕಚೇರಿ ವೇಳೆಯಲ್ಲಿ ಪರಿಗಣಿಸಲಾಗುವುದು ಮತ್ತು ಮೇಲಿನ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ, ಟೆಂಡರ್ ಮುಂದೂಡಿದಲ್ಲಿ ಹಾಗೂ ಇತರೆ ಬದಲಾವಣೆಗಳನ್ನು ಇ - ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು. ದಿನಪತ್ರಿಕೆಗಳ ಮುಖಾಂತರ ನೀಡಲಾಗುವುದಿಲ್ಲ.

ಸಹಿ/-
ಕಾರ್ಯನಿರ್ವಾಹಕ ಇಂಜಿನಿಯರ್,
ದ.ಕ.ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಮಂಗಳೂರು.

**ಪ್ರತಿಯನ್ನು:**

1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅಭಯ ಸಂಕೀರ್ಣ, 4ನೇ ಮಹಡಿ, ಶೇಷಾದ್ರಿಪುರಂ, ಬೆಂಗಳೂರು.
2. ಅಧೀಕ್ಷಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತ, ಮಂಗಳೂರು.
3. ಜಿಲ್ಲಾಧಿಕಾರಿಗಳು, ದ.ಕ.ಜಿಲ್ಲೆ, ರವರಿಗೆ ಸಲ್ಲಿಸುತ್ತಾ, ಸದರಿ ಪ್ರಕಟಣೆಯನ್ನು ತಮ್ಮ ಕಛೇರಿ ಜಿಲ್ಲಾ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಿಸಲು ಕೋರಲಾಗಿದೆ.
4. ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಗಳೂರು.
5. ಉಪನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಮಂಗಳೂರು ರವರಿಗೆ ಕಳುಹಿಸುತ್ತಾ, ಸದರಿ ಪ್ರಕಟಣೆಯನ್ನು ತಮ್ಮ ಕಛೇರಿ ವತಿಯಿಂದ ಹೆಚ್ಚು ಪ್ರಚಲಿತ ಯಾವುದಾದರೂ ಎರಡು ರಾಜ್ಯ ಮಟ್ಟದ ಹಾಗೂ ಎರಡು ಜಿಲ್ಲಾ ಮಟ್ಟದ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಮಂಗಳೂರು, ಬಂಟ್ವಾಳ,ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ಪ್ರಕಟಣೆ ಫಲಕದಲ್ಲಿ ಪ್ರಕಟಿಸಲು ಕೋರಿದೆ.
7. ಕಾರ್ಯಪಾಲಕ ಅಭಿಯಂತರವರ ಮೇಜಿಗೆ.
8. ವಿಭಾಗದ ಲೆಕ್ಕ ಪರಿಶೋಧನಾಧಿಕಾರಿಗಳು/ತಾಂತ್ರಿಕ ಸಹಾಯಕರು/ನಗದು ಸಹಾಯಕರು/ಕಛೇರಿ ನೋಟೀಸ್ ಬೋರ್ಡಿಗೆ/ಹೆಚ್ಚುವರಿ ಪ್ರತಿ.

ಕಾರ್ಯನಿರ್ವಾಹಕ ಇಂಜಿನಿಯರ್,
ದ.ಕ.ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಮಂಗಳೂರು.